ಒ ಎಸ್ 153/23

ಪಿ.ಕೆ. ಪ್ರಕಾಶ
**ಪಿಡಬ್ಲ್ಯೂ-2**

**ದಿನಾಂಕ 19.02.2025 ರಂದು** ಸಾಕ್ಷಿಗೆ **ಪ್ರಮಾಣ ವಚನ ಬೋಧಿಸಲಾಯಿತು.**
ಮುಂದುವರಿದ ವಾದಿ ಪರ ವಿಚಾರಣೆ ವಾದಿಯ ಪರ ಶ್ರೀ ಜಿ ಎಂ ವಕೀಲವರಿಂದ:

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. **ಪ್ರಮಾಣಪತ್ರದಲ್ಲಿ ತಿಳಿಸಿರುವ ವಿಷಯ ಸತ್ಯವಿರುತ್ತದೆ.** ಅದರಲ್ಲಿರುವ ಸಹಿ ನನ್ನದಾಗಿರುತ್ತದೆ. ಪ್ರಮಾಣ ಪತ್ರದಲ್ಲಿರುವ ಮಾಹಿತಿಯನ್ನು ನಾನು ಸ್ವತಃ ವಕೀಲರಿಗೆ ನೀಡಿರುತ್ತೇನೆ. **ಅದನ್ನು ನನ್ನ** ಸಾಕ್ಷ **ಎಂದು ಪರಿಗಣಿಸಲು ಕೋರುತ್ತೇನೆ.**

**2.** ಸಾಕ್ಷಿಯು ನಿಪಿ-**1** ಮತ್ತು **2** ರಲ್ಲಿರುವ ದೊಡ್ಡನಿಂಗೇಗೌಡರ ಹೆಬ್ಬೆಟ್ಟು ಗುರುತನ್ನು ನೋಡಿ ಗುರುತಿಸಿದರು. ನಾನು ನಿಪಿ-**1** ಮತ್ತು ನಿಪಿ-**2** ಕ್ಕೆ ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ. ಸಾಕ್ಷಿಯು ನಿಪಿ-**1** ಮತ್ತು **2** ರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಸದರಿ ಸಹಿಗಳು ಈಗಾಗಲೇ ನಿಪಿ-**1** ಎ ಮತ್ತು ನಿಪಿ-**2** ಎ ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿ ನನ್ನೊಂದಿಗೆ ವೆಂಕಟೇಶರವರು ಸಹಾ ಸಾಕ್ಷಿದಾರನಾಗಿ ಸಹಿ ಮಾಡಿದ್ದು, ಸಾಕ್ಷಿ ಸದರಿಯವರ ಸಹಿಗಳನ್ನು ನೋಡಿ ಗುರುತಿಸಿದ್ದು, ಸದರಿ ಸಹಿಗಳು ಈಗಾಗಲೇ ನಿಪಿ-**1** ಬಿ ಮತ್ತು ನಿಪಿ-**2** ಬಿ ಎಂದು ಗುರುತಿಸಲಾಗಿರುತ್ತದೆ. ಸದರಿ ನಿಪಿ-**1** ಮತ್ತು **2** ದಾಖಲೆಗಳನ್ನು ರಾಮಮೂರ್ತಿ ಪತ್ರ ಬರಹಗಾರರು ಬರೆದಿದ್ದು, ಸಾಕ್ಷಿ ಪತ್ರ ಬರಹಗಾರರ ಸಹಿಗಳನ್ನು ನೋಡಿ ಗುರುತಿಸಿದ್ದು, ಸದರಿ ಸಹಿಗಳು ಈಗಾಗಲೇ ನಿಪಿ-**1** ಸಿ ಮತ್ತು ನಿಪಿ-**2** ಸಿ ಎಂದು ಗುರುತಿಸಲಾಗಿರುತ್ತದೆ.

ಪ್ರತಿವಾದಿ ಪರ ವಕೀಲರು ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಗಿದೆ.

(ನನ್ನ ಉಕ್ತಲೇಖ ವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

**ಸಾ.ಓ.ಹೇ.ಸ.ಇದೆ.**

**2** ನೇ ಅಪರ **ಸಿವಿಲ್ ಜಡ್ಜ್ ಮತ್ತು**
**ಜೆಎಂಎಫ್‌ಸಿ, ಪಾಂಡವಪುರ.**